ದಿಃ 06-06-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ

ವಾದಿಯರು ಮತ್ತು 1 ನೇ ಪ್ರತಿವಾದಿ ರಾಯಪ್ಪ ಮತ್ತು ಮೃತ ಚೂನವ್ವ ಇವರ ಮಕ್ಕಳು ಎಂದರೆ ನಿಜ. ಈ ದಾವೆಯು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಮಧ್ಯೆ ನಡೆದಿದೆ. ನನ್ನ ಮೂಲ ಊರು ಕೊಪ್ಪಳ. ದಾವಾ ಆಸ್ತಿಯ ಬಾಜುಗೆ ಉತ್ತರಕ್ಕೆ ನನ್ನ ಜಮೀನು ಇದೆ. ದಾವಾ ಆಸ್ತಿಯು ಉತ್ತರಕ್ಕೆ ಹೀರಾಚಂದ್ ಕಸ್ತೂರಿ ಇವರ ಜಮೀನು ಇದೆ ಎಂದು ನಾನು ನನ್ನ ಅಫೀಡವಿಟ್‌ನಲ್ಲಿ ಬರೆಸಿದ್ದೇನೆಂದರೆ ನಿಜ. ನನ್ನ ಅಫೀಡವಿಟ್‌ನಲ್ಲಿ ನನ್ನ ಆಸ್ತಿ ದಾವಾ ಆಸ್ತಿಯ ಬಾಜು ಇದೆ ಎಂದು ಬರೆಸಿಲ್ಲ. ನಿಂಗಪ್ಪ ರಾಯಪ್ಪನಿಂದ ಖರೀದಿಗೆ ತೆಗೆದುಕೊಂಡು ನಿಖರ ದಿನಾಂಕ ಗೊತ್ತಿಲ್ಲ. ಅಜಮಾಸು 10-16 ವರ್ಷಗಳಾಯಿತು. ನಾನು ಸಾಕ್ಷಿಯಾಗಿ ಅಥವಾ ಹಿರಿಯನಾಗಿ ನಿಂಗಪ್ಪ ಮತ್ತು ರಾಯಪ್ಪರ ನಡುವೆ ನಡದ ವ್ಯವಹಾರದ ಕಾಗದ ಪತ್ರಗಳಿಗೆ ಸಹಿ ಮಾಡಿಲ್ಲ.

ಸರ್ವೆ ನಂ. 661/9 ಮತ್ತು 662/13 ಇವು ರಾಯಪ್ಪನ ಹಿರಿಯರ ಆಸ್ತಿಗಳು ಎಂದರೆ ನಿಜ. ಸದರಿ ಹಿರಿಯರ ಆಸ್ತಿಯನ್ನು ರಾಯಪ್ಪ ಭೀಮಪ್ಪ ಕರೆವ್ವಗೋಳ ಎಂಬುವವರಿಗೆ ಖರೀದಿಗೆ ಕೊಟ್ಟನು ಎಂದರೆ ಗೊತ್ತಿಲ್ಲ. ಸದರಿ ಆಸ್ತಿ ಮಾರಿದ ಹಣದಿಂದ ರಾಯಪ್ಪ ಸರ್ವೆ ನಂ. 548/1 ರ ಪೈಕಿ ದಾವಾ ಆಸ್ತಿ 1 ಎಕರೆ 10 ಗುಂಟೆಯನ್ನು ತೆಗೆದುಕೊಂಡನು ಎಂದರೆ ಗೊತ್ತಿಲ್ಲ. ಈ ದಾವೆ ಚಾಲ್ತಿಯಲ್ಲಿದ್ದಾಗ ನಿಂಗಪ್ಪ ರಾಯಪ್ಪನಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದನೆಂದರೆ ನಿಜ. ಸದರಿ ಖರೀದಿ ಕರಾರು ಪತ್ರಕ್ಕೆ ನಾನು ಸಹಿ ಮಾಡಿಲ್ಲ. ಖರೀದಿ ಕರಾರು ಪತ್ರಕ್ಕೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಈಗಲೂ ವಾದಿಯರ ಕಬ್ಜೆಯಲ್ಲಿದೆ ಎಂದರೆ ಸುಳ್ಳು. ನಿಂಗಪ್ಪ ದಾವಾ ಆಸ್ತಿಯಲ್ಲಿ ಕಬ್ಬು ಬೆಳೆದು ಕಾರ್ಖಾನೆಗೆ ಕಳುಹಿಸಿದ ಬಗ್ಗೆ ಇರುವ ಬಿಲ್‌ಗಳನ್ನು ನಾನು ನೋಡಿಲ್ಲ. ಸದರಿ ಆಸ್ತಿಯಲ್ಲಿ ಬ್ಯಾಂಕ್‌ನಿಂದ ಸಾಲ ಪಡೆದು ಪೈಪ್‌ಲೈನ್ ಹಾಕಿದ ಬಗ್ಗೆ ಇರುವ ದಾಖಲೆಗಳನ್ನು 4 ವರ್ಷಗಳ ಹಿಂದೆ ನೋಡಿದ್ದೇನೆ. ನಿಂಗಪ್ಪ ಮಾತು ಕೇಳಿ ಆತ ದಾವಾ ಆಸ್ತಿಯ ಕಬ್ಜೆಯಲ್ಲಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾಯಪ್ಪನಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ನಾನು ನೋಡಿಲ್ಲ. ನನ್ನ ಮನೆ ದಾವಾ ಆಸ್ತಿಯಿಂದ 3 ಕಿ.ಮಿ. ದೂರದಲ್ಲಿದೆ ಎಂದರೆ ಸುಳ್ಳು. ನನಗೂ ಮತ್ತು ರಾಯಪ್ಪನಿಗೂ ಮೊದಲಿನಿಂದಲೂ

ಮನಸಾ ಮನಸಾ ಸರಿಯಿಲ್ಲ ಎಂದರೆ ಸುಳ್ಳು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಪಾಲಿದೆ ಎಂದರೆ ನನಗೆ ಗೊತ್ತಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ